# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 241 | Pages. 2 | Date: 06-08-2025, WEDNESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 241 - ಪುಟಗಳು : 2 06-08-2025 ಬುಧವಾರ Ph: 8762954248 ದರ : ₹1


# ಸಾರಿಗೆ ಮುಷ್ಕರಕ್ಕೆ ಅಭೂತಪೂರ್ವ ಬೆಂಬಲ

## ಸಂಜೆ ವರೆಗೆ ರಸ್ತೆಗಿಳಿಯದ ಕೆಎಸ್ಆರ್‌ಟಿಸಿ ಬಸ್ | ಖಾಸಗಿ ವಾಹನಗಳ ಮೊರೆ ಹೋದ ಜನರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಂಗಳವಾರ ಕೆಎಸ್ಆರ್‌ಟಿಸಿ ನೌಕರರು ಮುಷ್ಕರ ನಡೆಸಿದ್ದರಿಂದ ಸಾರ್ವಜನಿಕ ಸಂಚಾರದಲ್ಲಿ ಭಾರೀ ವ್ಯತ್ಯಯವಾಯಿತು.

ನಗರದಲ್ಲಿ ಸೋಮವಾರ ರಾತ್ರಿಯಿಂದಲೇ ಬಸ್‌ಗಳು ಸಂಚರಿಸದ ಕಾರಣಕ್ಕೆ ಪ್ರಯಾಣಿಕರು ತೊಂದರೆ ಅನುಭವಿಸಿದರು. ಅರಕಲಗೂಡು ತಾಲ್ಲೂಕಿನ ರಾಮನಾಥಪುರ ಘಟಕದ ಒಂದು ಬಸ್ ಓಡಾಡಿದ್ದು ಹೊರತುಪಡಿಸಿ ಸಂಜೆ ವರೆಗೆ ಬಸ್‌ಗಳ ಸಂಚಾರ ಸಂಪೂರ್ಣ ಬಂದ್ ಆಗಿತ್ತು.

ಜಿಲ್ಲೆಯಲ್ಲಿ ಹಾಸನ-2, ಚನ್ನರಾಯಪಟ್ಟಣ, ಹೊಳೆನರಸೀಪುರ ಹಾಗೂ ರಾಮನಾಥಪುರ ತಲಾ ಒಂದೊಂದು ಸೇರಿ ಒಟ್ಟು ಡಿಪೋ





ವ್ಯಾಪ್ತಿಯಲ್ಲಿ 500ಕ್ಕೂ ಹೆಚ್ಚು ಬಸ್ ಹಾಗೂ ಸುಮಾರು 3 ಸಾವಿರ ನೌಕರರು ಹಾಗೂ ಸಿಬ್ಬಂದಿ ಕರ್ತವ್ಯದಿಂದ ಹೊರಗುಳಿದಿದ್ದರು. ಹಾಸನದ ಎರಡೂ ಘಟಕಗಳಲ್ಲಿ 230 ಸಾರಿಗೆ ಬಸ್ ನಿಂತಿದ್ದವು. ಹೀಗಾಗಿ ನಗರ ಹಾಗೂ ಜಿಲ್ಲಾದ್ಯಂತ ಬಸ್ ನಿಲ್ದಾಣಗಳು ಬಸ್ ಹಾಗೂ ಪ್ರಯಾಣಿಕರಿಲ್ಲದೆ ಭಣಗುಡುತ್ತಿದ್ದವು. ಮುಷ್ಕರ ವಿಷಯ ತಿಳಿದಿದ್ದರಿಂದ ಪ್ರಯಾಣಿಕರು ಹೆಚ್ಚಾಗಿ ಆಗಮಿಸಿರಲಿಲ್ಲ. ಬಂದರೂ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಇವರು ಬೇರೆ ಮಾರ್ಗ ಇಲ್ಲದೆ ಖಾಸಗಿ ವಾಹನಗಳಲ್ಲೇ ಪ್ರಯಾಣ ಬೆಳೆಸಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಖಾಸಗಿ ವಾಹನಗಳ ಸಂಚಾರಕ್ಕೆ ಮೊದಲೇ ಸೂಚನೆ ನೀಡಿದ್ದರು.

ಈ ಹಿನ್ನೆಲೆಯಲ್ಲಿ ನಗರದಿಂದ ವಿವಿಧೆಡೆಗಳಿಗೆ ತೆರಳಲು ಖಾಸಗಿ ವಾಹನಗಳು ದಿಢೀರ್ ರಸ್ತೆಗಿಳಿದಿದ್ದವು. ಎನ್.ಆರ್.ವೃತ್ತ ಸೇರಿದಂತೆ ಅನೇಕ ಕಡೆಗಳಲ್ಲಿ

ಟ್ರಾಫಿಕ್ ಜಾಂ ಉಂಟಾಗಿತ್ತು. ಜಿಲ್ಲಾಧಿಕಾರಿ ಜಿಲ್ಲೆಯ ವಿವಿಧೆಡೆ ಸಂಚರಿಸಿ ಖಾಸಗಿ ವಾಹನಗಳನ್ನು ಸಿದ್ಧಗೊಳಿಸುವ ಮೂಲಕ ಪ್ರಯಾಣಿಕರಿಗೆ ಹೆಚ್ಚಿನ ತೊಂದರೆ ಆಗದಂತೆ ನಿಗಾ ವಹಿಸಿದರು.

### ಅಧಿಕಾರಿಗಳ ಸರ್ಕಸ್-ಆಕ್ರೋಶ

ಈ ನಡುವೆ ಮುಷ್ಕರ ನಡುವೆಯೂ ಬೇರೆ ಚಾಲಕರನ್ನು ಕರೆಸಿ ಬಸ್ ಸಂಚಾರ ಆರಂಭಿಸಲು ಅಧಿಕಾರಿಗಳ ಸರ್ಕಸ್ ನಡೆಸಿದರಾದರೂ ಅದು ಫಲಿಸಲಿಲ್ಲ. ಇದಕ್ಕೆ ಖಾಸಗಿ ವಾಹನ ಮಾಲೀಕರು, ಚಾಲಕರು ಸಿಟ್ಟು ಹೊರ ಹಾಕಿದರು. ಆರ್‌ಟಿಒ ಅಧಿಕಾರಿಗಳು ಹೇಳಿದಂತೆ ನಾವು ಇಲ್ಲಿಗೆ ಬಂದಿದ್ದೇವೆ, ಅವರು ನಿಗದಿಪಡಿಸಿರುವ ದರ ಪಡೆದೇ ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ಸಿದ್ಧರಿದ್ದೇವೆ. ಆದರೆ ಸಾರಿಗೆ ಬಸ್‌ಗಳನ್ನೇ ಓಡಿಸುವ ನಡೆಯನ್ನು ನಾವು ಒಪ್ಪುವುದಿಲ್ಲ ಎಂದು ಅಸಮಾಧಾನ ಹೊರ ಹಾಕಿ, ಬಸ್ ನಿಲ್ದಾಣದಿಂದ ಹೊರ ಹೋದರು. ಅವರನ್ನು ಕರೆತರಲು ಅಧಿಕಾರಿಗಳು ಮತ್ತಷ್ಟು ಕಸರತ್ತು ಮಾಡಬೇಕಾಯಿತು.

### ಬಿಗಿ ಪೊಲೀಸ್ ಬಂದೋಬಸ್ತ್

ಸಾರಿಗೆ ಬಸ್ ನಿಲ್ದಾಣಕ್ಕೆ ಹತ್ತಾರು ಸಂಖ್ಯೆಯ ಖಾಸಗಿ ಬಸ್ ಹಾಗೂ ಇತರೆ ವಾಹನಗಳು ಎಂಟ್ರಿಕೊಟ್ಟ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

**ಚನ್ನರಾಯಪಟ್ಟಣ ವರದಿ:** ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದ ಮುಷ್ಕರಕ್ಕೆ ತಾಲೂಕಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಬಸ್‌ಗಳು ರಸ್ತೆಗಿಳಿಯದ ಕಾರಣ ಪ್ರಯಾಣಿಕರು ಪರದಾಡಿದರು. ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಶಾಲಾ, ಕಾಲೇಜು ಉದ್ಯೋಗ ಸೇರಿ ನಾನಾ ಕಾರಣಗಳಿಂದ ಬರುವ ವಿದ್ಯಾರ್ಥಿಗಳು, ಸಾರ್ವಜನಿಕರು ಬಸ್‌ಗಳಿಲ್ಲದೆ ತೊಂದರೆಗೆ ಸಿಲುಕಿದರು.

ನಿವೃತ್ತ ಸಾರಿಗೆ ನೌಕರ ರಂಗಸ್ವಾಮಿ ಮಾತನಾಡಿ, ಹಗಲು ಇರುಳು ಎನ್ನದೆ ಮನೆ ಮಕ್ಕಳು, ಮಡದಿಯನ್ನು ತೊರೆದು ಅಗತ್ಯ ಸೇವೆ ಎಂದು ಪರಿಗಣಿಸಿ ಕರ್ತವ್ಯ ನಿರ್ವಹಿಸುವ ಸಾರಿಗೆ ನೌಕರರ ಕನಿಷ್ಠ ಸೌಲಭ್ಯವನ್ನು ಈಡೇರಿಸಲಾಗದ ಸರ್ಕಾರಕ್ಕೆ ನಮ್ಮ ಧಿಕ್ಕಾರ. ಕೆಲಸಕ್ಕೆ ಸಮನಾದ ವೇತನವನ್ನು ನೀಡದ ಸರ್ಕಾರ ಇತರೆ ಇಲಾಖೆಗಳ ಸರ್ಕಾರಿ ನೌಕರರನ್ನ ಒಂದು ರೀತಿಯಲ್ಲಿ, ಸಾರಿಗೆ ನೌಕರರನ್ನ ಮತ್ತೊಂದು ರೀತಿ ನೋಡುತ್ತಿದೆ ಎಂದು ಆರೋಪಿಸಿದರು.

ಸಂಘಟನೆಗಳ ಮುಖಂಡರಾದ ಕರಿಯಪ್ಪ, ತೇಜಸ್, ಚಂದ್ರಹಾಸ, ಮಧುಸೂದನ, ಮಂಜೇಗೌಡ, ರಾಮು, ಲೋಕೇಶ್, ರವಿ, ಗೌಡಯ್ಯ ಇತರರಿದ್ದರು.

**ಅರಕಲಗೂಡು ವರದಿ:** ಪಟ್ಟಣದ ಕೇಂದ್ರ ಬಸ್ ನಿಲ್ದಾಣದಿಂದ ದೂರದ ಊರುಗಳಿಗೆ ಪ್ರಯಾಣಿಕರು ಸಂಚಾರ ಮಾಡಲು ಜಿಲ್ಲಾ ಆಡಳಿತ ಖಾಸಗಿ ವಾಹನ ಸೇವೆ ಕಲ್ಪಿಸಿದ್ದ ಪರಿಣಾಮ ಮುಷ್ಕರದ ಬಿಸಿ ಸ್ಥಳೀಯ ಪ್ರಯಾಣಿಕರಿಗೆ ತಟ್ಟಲಿಲ್ಲ. ಪಟ್ಟಣ ಸೇರಿದಂತೆ ರಾಮನಾಥಪುರ, ಕೇರಳಾಪುರ ಹಾಗೂ ಕೊಣನೂರು ಸಾರಿಗೆ ಬಸ್ ನಿಲ್ದಾಣಗಳಿಂದ ಖಾಸಗಿ ವಾಹನಗಳ ಸೇವೆ ಮಾಡಲಾಗಿರುವುದು ಕಂಡುಬಂದಿತು.

ಅರಕಲಗೂಡು ಮತ್ತು ರಾಮನಾಥಪುರ ಬಸ್ ಘಟಕಗಳಿಂದ ನಿತ್ಯವೂ ನೂರಕ್ಕೂ ಅಧಿಕ ಬಸ್ ಗಳು ಸಂಚಾರ ಮಾಡುತ್ತಿದ್ದು, ಇಂದಿನ ಮುಷ್ಕರ ಹಿನ್ನೆಲೆ ಯಾವುದೇ ಬಸ್ ರಸ್ತೆಗೆ ಇಳಿದಿಲ್ಲ. ಆದರೆ ಸಾರಿಗೆ ಸಿಬ್ಬಂದಿಗಳು ಬಸ್ ನಿಲ್ದಾಣದಲ್ಲಿ ಹಾಜರಿದ್ದು ಪೊಲೀಸರ ನೆರವಿನಿಂದ ಖಾಸಗಿ ವಾಹನ ಮೂಲಕ ಹಾಸನ, ಬೆಂಗಳೂರು, ಮೈಸೂರ್, ಕೊಣನೂರು, ಹೊಳೆನರಸೀಪುರ ಕಡೆ ಪ್ರಯಾಣಿಕರನ್ನು ಕಳುಹಿಸುತ್ತಿರುವುದು ಕಂಡುಬಂದಿತು.




ಆದರೆ ಹಳ್ಳಿ ಕಡೆ ಯಾವುದೇ ವಾಹನ ವ್ಯವಸ್ಥೆ ಮಾಡಿರಲಿಲ್ಲ. ಪ್ರಮುಖವಾಗಿ ಮಹಿಳೆಯರ ಓಡಾಟ ವಿರಳವಾಗಿತ್ತು. ಶಾಲಾ ಕಾಲೇಜುಗಳಿಗೆ ಗ್ರಾಮೀಣ ಭಾಗದಿಂದ ಬರುವ ಮಕ್ಕಳ ಸಂಖ್ಯೆಯು ಕಡಿಮೆಯಾಗಿತ್ತು.

ಶಕ್ತಿ ಯೋಜನೆ ಫಲಾನುಭವಿಗಳಾಗಿರುವ ಮಹಿಳೆಯರು, ವಿದ್ಯಾರ್ಥಿನಿಯರು ಹೆಚ್ಚಿನ ಪ್ರಮಾಣದಲ್ಲಿ ಮನೆಯಲ್ಲಿಯೇ ಉಳಿದಿದ್ದ ಪರಿಣಾಮ ಖಾಸಗಿ ವಾಹನಗಳಲ್ಲಿ ಇಂದು ಸಂಚಾರ ಮಾಡುವವರ ಪೈಕಿ ಹೆಚ್ಚಿನ ಸಂಖ್ಯೆಯಲ್ಲಿ ಪುರುಷರು, ಯುವಕರು ಕಂಡುಬಂದರು.

ಶಕ್ತಿಯೋಜನೆ ಅನುಷ್ಠಾನಕ್ಕೆ ಬಂದಾಗಿನಿಂದಲೂ ಕೂಡ ಖಾಸಗಿ ವಾಹನಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಇಳಿಮುಖಗೊಂಡಿತ್ತು. ಇಂದಿನ ಸಾರಿಗೆ ಬಸ್ ನೌಕರರ ಮುಷ್ಕರ ಹಿನ್ನೆಲೆ ಖಾಸಗಿ ವಾಹನಗಳು ರಸ್ತೆಗೆ ಹೆಚ್ಚಿನ ಮಟ್ಟದಲ್ಲಿ ಇಳಿದಿದ್ದು, ಆದಾಯ ಸಂಪಾದನೆ ಕೂಡ ದೊರೆತಿದೆ ಎನ್ನಲಾಗಿದೆ.

### 443 ಮಾರ್ಗಸೂಚಿ

ಅರಕಲಗೂಡು ಬಸ್ ನಿಲ್ದಾಣ ಮೂಲಕ ನಿತ್ಯವೂ 443 ವಿವಿಧ ಮಾರ್ಗಸೂಚಿಗಳಿಂದ ಬಸ್‌ಗಳು ಸಂಚರಿಸುತ್ತಿವೆ. ಅರಕಲಗೂಡು ಬಸ್ ಘಟಕದಲ್ಲಿ 85 ಬಸ್‌ಗಳು, ರಾಮನಾಥಪುರ ಘಟಕದಲ್ಲಿ 91 ಬಸ್‌ಗಳು ಇದ್ದು, 120 ಅರಕಲಗೂಡು ಘಟಕದಿಂದ ಹಾಗೂ ರಾಮನಾಥಪುರ ಘಟಕದಿಂದ 150 ಮಾರ್ಗಸೂಚಿಗಳು ಇವೆ. ಇದರೊಂದಿಗೆ ಇತರೆ ಬಸ್ ಘಟಕಗಳಿಂದ 173 ಮಾರ್ಗಸೂಚಿಗಳ ಬಸ್‌ಗಳು ಸಂಚರಿಸುತ್ತಿವೆ. ಒಟ್ಟು 133ಕ್ಕೂ ಅಧಿಕ ಸಂಖ್ಯೆಯ ಸಾರಿಗೆ ಬಸ್‌ಗಳು ಅರಕಲಗೂಡು ಬಸ್ ನಿಲ್ದಾಣಕ್ಕೆ ಬಂದುಹೋಗುತ್ತಿವೆ. ಪ್ರತಿನಿತ್ಯವೂ 12ರಿಂದ 13 ಸಾವಿರ ಮಂದಿ ಪ್ರಯಾಣಿಸುತ್ತಾರೆ.

### ಸಕಲೇಶಪುರ ವರದಿ

ತಾಲ್ಲೂಕಿನಾದ್ಯಂತ ಕೆಎಸ್ಆರ್‌ಟಿಸಿ ಬಸ್ ಸೇವೆಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಸಾರ್ವಜನಿಕರು ವಿದ್ಯಾರ್ಥಿಗಳು, ಕಚೇರಿಗೆ ತೆರಳುವ ನೌಕರರು ಪರದಾಡುವಂತಾಯಿತು.

ಮುಷ್ಕರದ ಕಾರಣ ಸರ್ಕಾರಿ ಬಸ್‌ಗಳು ರಸ್ತೆಗೆ ಇಳಿಯದೇ ನಿಲ್ಲಿಸಿರುವುದರಿಂದ, ಬೆಳಗಿನ ಜಾವದಿಂದಲೇ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರು ನಿರಾಶೆ ಅನುಭವಿಸಿದರು. ಪ್ರಯಾಣಿಕರು, ವಿದ್ಯಾರ್ಥಿಗಳು ಹಳೆ ಬಸ್ ನಿಲ್ದಾಣದ ಸಮೀಪ ಮಾಹಿತಿಯಿಲ್ಲದೆ ಕಾದು ನಿಂತಿರುವ ದೃಶ್ಯಗಳು ಕಂಡುಬಂತು.

ಖಾಸಗಿ ಬಸ್‌ಗಳು ಹಾಗೂ ಟಾಟಾ ಮ್ಯಾಜಿಕ್, ಟಿಟಿ ಟ್ಯಾಕ್ಸಿ ವಾಹನಗಳು ಮಾತ್ರ ರಸ್ತೆಗಿಳಿದಿದ್ದರೂ, ಅವುಗಳಲ್ಲಿ ಹೆಚ್ಚುವರಿ ದರವನ್ನು ನಿಗದಿಪಡಿಸಲಾಗಿಲ್ಲ ಎಂದು ಖಾಸಗಿ ವಾಹನ ಮಾಲೀಕರು ತಿಳಿಸಿದ್ದಾರೆ. ಕೆಲವು ಖಾಸಗಿ ವಾಹನ ಚಾಲಕರು ಹಾಗೂ ಮಾಲೀಕರು ಸಾರ್ವಜನಿಕರು ನಮ್ಮ ವಾಹನಗಳ ಸೇವೆ ಬಳಸಿಕೊಳ್ಳಬೇಕು, ನಾವು ಸಹಕಾರ ನೀಡುತ್ತೇವೆ ಎಂದು ತಿಳಿಸಿದರು.

### ಅಘೋಷಿತ ಬಂದ್ ವಾತಾವರಣ

ಸಾರಿಗೆ ಮುಷ್ಕರ ಹಿನ್ನೆಲೆ ಜಿಲ್ಲೆಯಲ್ಲಿ ಶಾಲಾ ಕಾಲೇಜು ಬಳಿ ಅಘೋಷಿತ ಬಂದ್ ವಾತಾವರಣ ನಿರ್ಮಾಣ ಆಗಿತ್ತು.

ಗ್ರಾಮೀಣ ಭಾಗದಿಂದ ಬಸ್ ಇಲ್ಲದ ಕಾರಣ ಹೆಚ್ಚು ವಿದ್ಯಾರ್ಥಿಗಳು ತರಗತಿಗೆ ಬಂದಿರಲಿಲ್ಲ. ನಗರದ ಗಂಧದ ಕೋಠಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿನಿಯರಿಲ್ಲದೆ ತರಗತಿಯೇ ನಡೆಯಲಿಲ್ಲ. ಒಟ್ಟು 850 ವಿದ್ಯಾರ್ಥಿನಿಯರಲ್ಲಿ 100 ಮಕ್ಕಳೂ ಬಂದಿರಲಿಲ್ಲ. ದುಬಾರಿ ಹಣನೀಡಿ ಖಾಸಗಿ ವಾಹನಗಳಲ್ಲಿ ಬರಲು ಕಷ್ಟಸಾಧ್ಯ, ಹಾಗಾಗಿ ಸರ್ಕಾರ ಬೇಗ ಒಂದು ನಿರ್ಧಾರಕ್ಕೆ ಬರಲಿ ಎಂದು ಮನವಿ ಮಾಡಿದರು.



# ಗ್ರಾಮೀಣ ರಸ್ತೆಗೆ 1.66 ಕೋಟಿ ರೂ.: ಶಾಸಕ ಎ.ಮಂಜು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ದೊಡ್ಡಮಗ್ಗೆ, ದುಮ್ಮಿಕೊಪ್ಪಲು ಹಾಗೂ ದುಮ್ಮಿ ಗ್ರಾಮಗಳಲ್ಲಿ ರಸ್ತೆ ಕಾಮಗಾರಿಗೆ 1.66 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಶಾಸಕ ಎ.ಮಂಜು ಹೇಳಿದರು.

ತಾಲ್ಲೂಕಿನ ಕೊಡಕಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದೊಡ್ಡಮಗ್ಗೆ ಗ್ರಾಮದಲ್ಲಿ 35 ಲಕ್ಷ ರೂ., ಕೊಡಕಳ್ಳಿ ಗ್ರಾಮದಲ್ಲಿ 30 ಲಕ್ಷ ರೂ. ದುಮ್ಮಿಕೊಪ್ಪಲು ಗ್ರಾಮದಲ್ಲಿ 25 ಲಕ್ಷ ರೂ., ದುಮ್ಮಿ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಕಾಮಗಾರಿ ಕೈಗೊಳ್ಳಲಾಗಿದೆ. ಸರ್ಕಾರ ಇತ್ತೀಚೆಗೆ ಅನುದಾನ ಕೊಡಲು ಆರಂಭಿಸಿದೆ. ಇನ್ನಾದರೂ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನವನ್ನು ನಿಗದಿತ ಅವಧಿಯೊಳಗೆ ಬಿಡುಗಡೆ ಮಾಡಿದರೇ ಜನರಿಗೆ ಅಗತ್ಯ ಮೂಲಸೌಕರ್ಯ ಕಲ್ಪಿಸಬಹುದಾಗಿದೆ ಎಂದು ಹೇಳಿದರು.

ಇಂದು ಭೂಮಿ ಪೂಜೆ ಮಾಡಿರುವ ಕಾಮಗಾರಿಗಳಲ್ಲಿ ಕಾಂಕ್ರೀಟ್ ರಸ್ತೆ ಸೇರಿವೆ. ಜನ ವಸತಿ ಪ್ರದೇಶದಲ್ಲಿ ಕೆಲಸವನ್ನು ಗುಣಮಟ್ಟದಿಂದ ಮಾಡಿ ಮೆಚ್ಚುಗೆ ಪಡೆದುಕೊಳ್ಳಬೇಕೆಂದು ಗುತ್ತಿಗೆದಾರ, ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ರಮೇಶ್, ಮುಖಂಡರಾದ ಪಟೇಲ್ ರಾಜೇಗೌಡ, ಅಶೋಕ್, ರಘು, ಪ್ರಸನ್ನ ಇತರರು ಹಾಜರಿದ್ದರು.

### ವದಂತಿಗೆ ಕಿವಿಗೊಡಬೇಡಿ

ಅರಕಲಗೂಡು ಪಟ್ಟಣದ ಸಮಗ್ರ ಅಭಿವೃದ್ಧಿ ಹಿನ್ನೆಲೆ 2041ರ ಮಾಸ್ಟರ್ ಯೋಜನೆ ಸಿದ್ಧಗೊಂಡಿದೆಯಾದರೂ ಅಂತಿಮಗೊಂಡಿಲ್ಲ. ಹೀಗಿದ್ದರೂ ಕೆಲವರು ಮಾಸ್ಟರ್ ಪ್ಲಾನ್‌ನಲ್ಲಿರುವ ಸರ್ವೆ ನಂಬರ್ ಮಾಲೀಕರನ್ನು ಸಂಪರ್ಕಿಸಿ ಆಮಿಷ ಒಡುತ್ತಿದ್ದಾರೆ ಎಂದು ಶಾಸಕ ಎ. ಮಂಜು ಆರೋಪಿಸಿದರು.

ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲ್ಲೂಕು ಕೇಂದ್ರದಿಂದ 5 ಕಿ.ಮೀ. ದೂರದ ಒಳಗೆ ಪಟ್ಟಣದ ಸಮಗ್ರ ಅಭಿವೃದ್ಧಿಯನ್ನು ಈ ಯೋಜನೆ ಒಳಗೊಂಡಿದೆ. ಅದು ಇನ್ನೂ ಅಂತಿಮಗೊಂಡಿಲ್ಲ. ಅದರ ರೂಪುರೇಷೆಗಳ ಕುರಿತು ಯಾವ ಅಧಿಕಾರಿಗಳು ನನ್ನೊಂದಿಗೆ ಚರ್ಚಿಸಿಲ್ಲ. ಯೋಜನೆ ಸಿದ್ಧಗೊಂಡಿದೆ ವಿನಃ ಅಂತಿಮಗೊಂಡಿಲ್ಲ. ಕ್ಷೇತ್ರದಲ್ಲಿ ಕೆಲವರು ಈ ಯೋಜನೆ ಹಿಡಿದುಕೊಂಡು ನಿಮ್ಮ ಜಮೀನಿನಲ್ಲಿ ರಸ್ತೆ ಹೋಗುತ್ತೆ. ಬಫರಿಂಗ್ ಜೋನ್, ಯಲ್ಲೋ ಜೋನ್ ಇತರೆ ವಿಷಗಳನ್ನಿಟ್ಟುಕೊಂಡು ನಿಮ್ಮ ಜಮೀನನ್ನು ಯೋಜನೆಯಿಂದ ಕೈ ಬಿಡುತ್ತೇವೆಂದು ಹೇಳಿ ವಸೂಲಾತಿ ನಡೆಸುತ್ತಿರುವ ಮಾಹಿತಿ ಬಂದಿದೆ. ಅದಕ್ಕೆ ಯಾರೂ ಅವಕಾಶ ಮಾಡಿಕೊಡ ಬಾರದು. ಈ ಯೋಜನೆ ಅನುಮೋದನೆಗೆ ಇನ್ನೂ ಸಮಯವಿದೆ. ನಿಮ್ಮ ಜಮೀನು ಯೋಜನೆಗೆ ಒಳಪಟ್ಟದ್ದರೆ ನಾಲ್ಕು ಪಟ್ಟು ಪರಿಹಾರ ಪಡೆದುಕೊಳ್ಳಬಹುದಾಗಿದೆ ಎಂದು ಅಭಯ ನೀಡಿದರು.

ಈಗಿನ ಯೋಜನೆಯಲ್ಲಿ ಒಂದಷ್ಟು ಪ್ರಗತಿಗೆ ಜಾಗವನ್ನು ಗುರುತಿಸಲಾಗಿದೆ. 489.62 ಹೆಕ್ಟೇರ್ ವಿಸ್ತೀರ್ಣ ವಸತಿಗೆಂದು ಶೇ. 63.15 ಗುರುತಿಸಲಾಗಿದೆ. ಟ್ರಾನ್ಸ್‌ಪಾರ್ಟೇಷನ್ ಅಂಡ್ ಕಮ್ಯುನಿಕೇಷನ್‌ಗೆ 127.97 ಹೆಕ್ಟೇರ್ ಒಟ್ಟು 775.52 ಹೆಕ್ಟೇರ್ ಇರಬೇಕಿದೆ. ಈ ಪ್ಲಾನ್ ಇನ್ನೂ ಅಂತಿಮಗೊಂಡಿಲ್ಲದ ಪರಿಣಾಮ ಕೆಲವು ವ್ಯಕ್ತಿಗಳು ಇದನ್ನೆ ತೋರಿಸಿಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

# ಎಆರ್‌ಟಿಒ ಕಛೇರಿಗೆ ಶಾಸಕ ಸಿಮೆಂಟ್ ಮಂಜು ದಿಢೀರ್ ಭೇಟಿ

## ಕರ್ತವ್ಯ ಲೋಪ ಎಸಗಿದರೆ ಸಹಿಸುವುದಿಲ್ಲ | ಜನರೊಂದಿಗೆ ಸೌಜನ್ಯದಿಂದ ವರ್ತಿಸಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಪಟ್ಟಣದ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗೆ ಶಾಸಕ ಸಿಮೆಂಟ್ ಮಂಜು ಮಂಗಳವಾರ ದಿಢೀರ್ ಭೇಟಿ ಪರಿಶೀಲಿಸಿದರು.

ಶಾಸಕರ ಏಕಾಏಕಿ ಭೇಟಿಗೆ ಸಿಬ್ಬಂದಿ ಹಾಗೂ ಮದ್ಯವರ್ತಿಗಳು ಒಂದು ಕ್ಷಣ ತಬ್ಬಿಬ್ಬಾದರು. ಅಲ್ಲೇ ಇದ್ದ ಜನರನ್ನು ಮಾತನಾಡಿಸಿದ ಶಾಸಕರು ತೊಂದರೆಗಳಿಗೆ ಕಿವಿಯಾದರು. ಬೇಲೂರು ಮೂಲದ ವ್ಯಕ್ತಿಯೊಬ್ಬ ವಾಹನವೊಂದರ ದಾಖಲಾತಿ ನೀಡಿದ್ದು ಅವರು ಅದನ್ನು ಕಚೇರಿಗೆ ನೀಡಿದ್ದರು. ಕಡತಗಳು ನಾಪತ್ತೆಯಾಗಿರುವುದರಿಂದ ವ್ಯಕ್ತಿ ಶಾಸಕರ ಮುಂದೆ ಕಣ್ಣೀರು ಹಾಕಿದರು. ಎರಡು ದಿನದೊಳಗೆ ಆತನಿಗೆ ದಾಖಲಾತಿ ಮಾಡಿಕೊಡಬೇಕೆಂದು ಸ್ಥಳದಲ್ಲಿದ್ದ ನೌಕರರಿಗೆ ಆದೇಶಿಸಿದರು.

ಇದೇ ಸಂದರ್ಭದಲ್ಲಿ ಕೆಲವರು ಶಾಸಕರಿಗೆ ದೂರು ನೀಡಿ ಎಆರ್‌ಟಿಒ ಕಚೇರಿಯಲ್ಲಿ ದಲ್ಲಾಳಿಗಳ ಮೂಲಕ ಬಂದರೆ ಮಾತ್ರ ಕೆಲಸವಾಗುತ್ತದೆ. ನೇರವಾಗಿ ಬಂದರೆ ಸಿಬ್ಬಂದಿ ಅಗೌರವವಾಗಿ ಕಂಡು ಕೆಲಸ ಮಾಡಿ ಕೊಡುವುದಿಲ್ಲ ಎಂದು ದೂರಿದರು.

ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಯ ಮೂವರು ಅಧಿಕಾರಿಗಳು ಮಾಡಿದ ತಪ್ಪಿಗೆ ಅಮಾನತುಗೊಂಡಿದ್ದಾರೆ. ಈಗಿರುವ ನೌಕರರು ಅದೇ ಧೋರಣೆ ಮುಂದುವರಿಸಿದರೆ ಕ್ರಮಕ್ಕೆ ಸೂಚಿಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಎಚ್ಚರಿಕೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರೆಕಾರ್ಡ್ ರೂಂ ಹೊರತುಪಡಿಸಿ ಸಾರ್ವಜನಿಕರು ಕಚೇರಿಯ ಎಲ್ಲಿ ಬೇಕಾದರೂ ಅಧಿಕಾರಿಗಳನ್ನು ನೇರವಾಗಿ ಭೇಟಿಯಾಗಿ ತಮ್ಮ ಕೆಲಸ ಮಾಡಿಕೊಳ್ಳಬಹುದು. ಮದ್ಯವರ್ತಿಯೊಬ್ಬರ ಹುಟ್ಟು ಹಬ್ಬವನ್ನು ಕಚೇರಿಯಲ್ಲೇ ಆಚರಿಸಿದ್ದಕ್ಕಾಗಿ ಮೂವರು ಅಮಾನತಾಗಿದ್ದಾರೆ. ಈಗಿರುವ ನೌಕರರು ಪಾರದರ್ಶಕವಾಗಿ ಕೆಲಸ ಮಾಡುತ್ತಿಲ್ಲವೆಂಬ ದೂರು ಕೇಳಿಬಂದ ಹಿನ್ನೆಲೆಯಲ್ಲಿ ಭೇಟಿ ನೀಡಿದ್ದೇನೆ. ಅಧಿಕಾರಿಗಳು ಧೋರಣೆ ಬದಲಾಯಿಸಿಕೊಂಡು ಸಾರ್ವಜನಿಕರ ಕೆಲಸಗಳಿಗೆ ಆದ್ಯತೆ ನೀಡಬೇಕು ಎಂದು ಹೇಳಿದರು.

ಸಾರ್ವಜನಿಕರು ಕಟ್ಟುವ ತೆರಿಗೆ ಹಣದಿಂದ ಸಂಬಳ ಪಡೆಯುವ ನೌಕರರು ಅವರ ಸಮಸ್ಯೆಗೆ ಸ್ಪಂದಿಸಬೇಕು. ಸಕಲೇಶಪುರದ ಜನರು ಸೂಕ್ಷ್ಮ ಸ್ವಭಾವದವರು. ಅಗೌರವದಿಂದ ವರ್ತಿಸಿದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲ. ಪ್ರತಿಯೊಬ್ಬರೂ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಕಚೇರಿಯಲ್ಲಿ ಸಿಬ್ಬಂದಿ ಕೊರತೆ ಇರುವುದು ನನಗೆ ತಿಳಿದಿದೆ. ಸಾರಿಗೆ ಸಚಿವರೊಂದಿಗೆ ಈ ಬಗ್ಗೆ ಚರ್ಚಿಸಿದ್ದೇನೆ. ಶೀಘ್ರದಲ್ಲೇ ಖಾಲಿ ಹುದ್ದೆಗಳ ಭರ್ತಿ ಮಾಡಲಾಗುವುದು. ಮುಂದಿನ ದಿನಗಳಲ್ಲಿ ನಾನು ಪದೇ ಪದೇ ಕಚೇರಿಗೆ ಭೇಟಿ ನೀಡುತ್ತೇನೆ ಎಂದು ಹೇಳಿದರು.

ಎಆರ್‌ಟಿಒ ಬ್ರೇಕ್ ಇನ್ಸ್‌ಪೆಕ್ಟರ್ ಆಲಿಯುದ್ದೀನ್, ಸಿಬ್ಬಂದಿ ವೀಣಾ, ಅಶೋಕ್, ಪರಮೇಶ್, ಗೌತಮ್ ಇತರರಿದ್ದರು.

# ಬಿ. ಕಾಟಿಹಳ್ಳಿ ಶಾಲೆಯಲ್ಲಿ ಆರೋಗ್ಯ ತಪಾಸಣೆ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಬಿ. ಕಾಟಿಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣೆ ಶಿಬಿರದಲ್ಲಿ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. 20ಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.

ಬಿ. ಕಾಟಿಹಳ್ಳಿ ಶ್ರೀ ಜೋಡಿ ಆಂಜನೇಯ ಸ್ವಾಮಿ ಸೇವಾ ಸಮಿತಿ, ರೋಟರಿ ಕ್ಲಬ್ ಆಫ್ ಹಾಸನ್ ಸನ್ ರೈಸ್, ಹಾಸನಾಂಬ ಲಯನ್ಸ್ ಕ್ಲಬ್, ಪುನರ್ಜೀವ ಸ್ವಯಂ ಸೇವಾ ಸಂಸ್ಥೆ, ಚನ್ನರಾಯಪಟ್ಟಣ ಸ್ವಯಂ ಪ್ರೇರಿತ ರಕ್ತ ಕೇಂದ್ರದಿಂದ ಹುತಾತ್ಮ ರೈತರ ಸ್ಮರಣಾರ್ಥ ಮೈಸೂರಿನ ನಾರಾಯಣ ಆಸ್ಪತ್ರೆ ಸಹಕಾರದಲ್ಲಿ ಆರೋಗ್ಯ ಉಚಿತ ತಪಾಸಣೆ ಹಾಗು ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಎಸ್. ಚಂದ್ರಶೇಖರ್ ಕಾರ್ಯಕ್ರಮ ಉದ್ಘಾಟಿಸಿದರು.

ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಡಿ. ವಜ್ರಕುಮಾರ್, ಲಯನ್ಸ್ ಕ್ಲಬ್ ಅಧ್ಯಕ್ಷ ಕೆ.ಕೆ. ಮೋಹನ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ. ರಂಗನಾಥ, ರೋಟರಿ ಜಿಲ್ಲೆ 3182 ವಲಯ 9ರ ಸಹಾಯಕ ಗವರ್ನರ್ ರೋ. ಜೆ.ಎನ್. ಮಂಜುನಾಥ್, ಲಲಿತ್ ಕುಮಾರ್, ಭರತ್ ಕುಮಾರ್ ಮಾತನಾಡಿದರು. ದಾಕ್ಷಾಯಿಣಿ ಅವರು ಅಧ್ಯಕ್ಷತೆ ವಹಿಸಿದ್ದರು. ರೋಟರಿ ಕ್ಲಬ್ ಕಾರ್ಯದರ್ಶಿ ಕೆ.ಎಸ್. ಯೋಗೇಶ್, ಶಿಕ್ಷಕಿ, ದೀಪು, ಬೊಮ್ಮೇಗೌಡ, ಹರೀಶ್, ಲಲಿತ್ ಕುಮಾರ್, ಉದಯಶಂಕರ್ ಇತರರು ಹಾಜರಿದ್ದರು.

# ಮಹಾನಗರ ಪಾಲಿಕೆಗೆ ಸಿಬ್ಬಂದಿ ಬರ-ಅಭಿವೃದ್ಧಿ ಗರ

## ಮಂಜೂರು ಹುದ್ದೆ 1700 ಪ್ರಸ್ತುತ 400 ಜನರಿಂದ ಕೆಲಸ | ಸರ್ಕಾರದಿಂದ ಬಾರದ ಸ್ಪಂದನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನ ನಗರಸಭೆಯಿಂದ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದೆಯಾದರೂ ಅಗತ್ಯಕ್ಕೆ ತಕ್ಕಷ್ಟು ಸಿಬ್ಬಂದಿ ಇಲ್ಲದೆ ಸಾರ್ವಜನಿಕ ಕೆಲಸಗಳಿಗೆ ಭಾರೀ ಹಿನ್ನೆಡೆಯಾಗುತ್ತಿದೆ.

ಖಾಯಂ ಹಾಗೂ ಹೊರಗುತ್ತಿಗೆ ಸೇರಿ ವಿವಿಧ ವಿಭಾಗದಡಿ 1700 ಹುದ್ದೆಗಳ ಭರ್ತಿ ಮಾಡಬೇಕೆಂದು ಮಹಾನಗರ ಪಾಲಿಕೆ ಪೌರಾಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆಯಾದರೂ ಈ ನಿಟ್ಟಿನಲ್ಲಿ ಯಾವ ಪ್ರಗತಿಯೂ ಆಗಿಲ್ಲ. 4 ಎಫ್‌ಡಿಎಗಳ ಪೈಕಿ 2 ಹುದ್ದೆ ಭರ್ತಿಯಾಗಿದೆ. 12 ಎಸ್‌ಡಿಎಗಳ ಪೈಕಿ 4 ಜನರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ.




### ಯಾವ ಹುದ್ದೆಯೂ ಇಲ್ಲ

ಮಹಾನಗರ ಪಾಲಿಕೆಯಾದ ಬಳಿಕ ನಗರಸಭೆ ಅಧ್ಯಕ್ಷರಾಗಿದ್ದ ಎಂ. ಚಂದ್ರೇಗೌಡ ಪ್ರಥಮ ಮೇಯರ್, ಉಪಮೇಯರ್ ಆಗಿ ಹೇಮಲತಾ ಕಮಲ್ ಕುಮಾರ್ ಪದೋನ್ನತಿ ಪಡೆದಿದ್ದಾರೆ. ಆಯುಕ್ತರೂ ಪೌರಾಯುಕ್ತರಾಗಿದ್ದಾರೆ. ಇಷ್ಟು ಹೊರತುಪಡಿಸಿ ಆಡಳಿತಾಧಿಕಾರಿ, ಸೂಪರಿಂಟೆಂಡೆಂಟ್ ಎಂಜಿನಿಯರ್, ಸಹಾಯಕ ಎಂಜಿನಿಯರ್, ಕಂದಾಯ ಅಭಿವೃದ್ಧಿ ಉಪ ಆಯುಕ್ತರು, ಅಧಿಕಾರಿ, ಸಿಬ್ಬಂದಿ ನೇಮಕ ಮಾಡದೆ ಇರುವುದು ಆಡಳಿತ ವ್ಯವಸ್ಥೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.

### ಆರೋಗ್ಯ ನಿರೀಕ್ಷಕರ ಸಂಖ್ಯೆ ಕಡಿಮೆ

ಮಹಾನಗರ ಪಾಲಿಕೆಯಲ್ಲಿ ಸದ್ಯ ಐವರು ಆರೋಗ್ಯ ನಿರೀಕ್ಷಕರು ಕೆಲಸ ಮಾಡುತ್ತಿದ್ದಾರೆ. 35 ವಾರ್ಡ್ ಕೇವಲ ಇಷ್ಟು ಅಧಿಕಾರಿಗಳಿಂದ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈಗ ಹೊಸದಾಗಿ ನಗರ ಸುತ್ತಲಿನ 37 ಹಳ್ಳಿಗಳು ಸೇರ್ಪಡೆ ಆಗಿರುವುದರಿಂದ ಕಾರ್ಯಭಾರ ಹೆಚ್ಚಾಗಿದೆ. ಸ್ವಚ್ಛತೆ ಪರಿಶೀಲನೆ, ಹೋಟೆಲ್, ಬೀದಿ-ಬದಿ ಅಂಗಡಿಗಳಲ್ಲಿ ತಯಾರಾಗುವ ಆಹಾರ ಪರಿಶೀಲನೆ, ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಹತ್ತಾರು ಕೆಲಸಗಳಿರುತ್ತವೆ. ಆದರೆ ಇರುವ ಅತ್ಯಲ್ಪ ಸಿಬ್ಬಂದಿಯೇ ಎಲ್ಲಾ ಕೆಲಸ ಮಾಡಬೇಕೆನ್ನುವುದು ಅಧಿಕಾರಿಗಳನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

### ಸಿಎಂ ಹೇಳಿಕೆಗಷ್ಟೇ ಸೀಮಿತ

ಮಹಾನಗರ ಪಾಲಿಕೆಯಾಗಿ ಹಾಸನ ನಗರವನ್ನು ಮೇಲ್ದರ್ಜೆಗೇರಿಸಿದ ಸರ್ಕಾರ ಅದಕ್ಕೆ ತಕ್ಕಂತೆ ಅನುದಾನ ಹಾಗೂ ಸಿಬ್ಬಂದಿ ನೇಮಕಕ್ಕೆ ಹಸಿರು ನಿಶಾನೆ ತೋರಬೇಕಿತ್ತು. ಮುಂದಿನ ಮೂರು ವರ್ಷಗಳ ವರೆಗೆ ಅನುದಾನ ನೀಡುವುದಿಲ್ಲ ಜೊತೆಗೆ ಹಾಲಿ ಇರುವ ಸಿಬ್ಬಂದಿಯಿಂದಲೇ ಕೆಲಸ ಮಾಡಿಸಿಕೊಳ್ಳಬೇಕೆಂಬ ಆದೇಶ ಹೊರಬಿದ್ದಿರುವುದು ಚಿಂತೆಗೀಡು ಮಾಡಿದೆ. ಜು. 26 ರಂದು ಅರಸೀಕೆರೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ವಿಚಾರ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇನೆಂದು ಭರವಸೆ ನೀಡಿದ್ದರು. ಆದರೆ ವಾರ ಕಳೆದರೂ ಭರವಸೆ ಸಿಕ್ಕಿಲ್ಲ.

ಹಾಸನ ಮಹಾನಗರ ಪಾಲಿಕೆಗೆ 200 ಕೋಟಿ ರೂ. ಅನುದಾನ ನೀಡುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತಾದರೂ ಭರವಸೆ ಹುಸಿಯಾಗಿ ಉಳಿದಿದೆ. ಹೀಗಾಗಿ ಮೇಲ್ದರ್ಜೆಗೆ ಬದಲು ನಗರಸಭೆಯಾಗಿಯೇ ಇದ್ದಿದ್ದರೆ ಒಳ್ಳೆದಿತ್ತು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

### ಪೌರ ಕಾರ್ಮಿಕರ ಗೋಳು ಹೇಳತೀರದು

ಸದ್ಯ 35 ವಾರ್ಡ್‌ಗೆ ಒಬ್ಬ ಮಹಿಳೆ ಹಾಗೂ ಒಬ್ಬ ಪುರುಷ ಪೌರ ಕಾರ್ಮಿಕರನ್ನು ನೇಮಿಸಲಾಗಿದೆ. ಆದರೆ ಪಾಲಿಕೆ ವ್ಯಾಪ್ತಿ ವಿಸ್ತಾರಗೊಂಡಿರುವುದಿಂದ ಕಸ ವಿಲೇವಾರಿಗೆ ಕಾರ್ಮಿಕರ ಕೊರತೆ ಮಿತಿ ಮೀರಿದೆ. ಮೊದಲಿಗಿಂತ ಕೆಲಸ ಹೆಚ್ಚಾಗಿರುವುದರಿಂದ ಪೌರ ಕಾರ್ಮಿಕರ ಮೇಲ್ವಿಚಾರಕರೊಂದಿಗೆ ನಿತ್ಯ ವಾಗ್ವಾದ ನಡೆಯುತ್ತಲೇ ಇದೆ. ಮಹಾನಗರ ಪಾಲಿಕೆಯಲ್ಲಿ 123 ಖಾಯಂ ಪೌರ ಕಾರ್ಮಿಕರಿದ್ದರೆ ಸ್ವಚ್ಛತಾ ಕಾರ್ಮಿಕರಾಗಿ 70 ಸಿಬ್ಬಂದಿ ಹೊರಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನು ಗ್ರಾಮ ಪಂಚಾಯಿತಿಗಳಿಗೆ ಕಸ ವಿಲೇವಾರಿಗಾಗಿ ನಿಯೋಜಿಸಿರುವ ಟಿಪ್ಪರ್‌ಗಳು ದಕ್ಷತೆಯಿಂದ ಕಾರ್ಯನಿರ್ವಹಿಸದೆ ಇರುವ ಪರಿಣಾಮ ಕಸ ವಿಲೇವಾರಿ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಕಳೆದ ಜನವರಿಯಲ್ಲಿ 12 ಹೊಸ ಕಸ ಸಂಗ್ರಹ ವಾಹನಗಳನ್ನು ಪಾಲಿಕೆ ಕಾರ್ಯಕ್ಕೆ ನೀಡಲಾಗಿದೆಯಾದರೂ ಸಂಪೂರ್ಣ ಕಸ ವಿಲೇವಾರಿ ಮಾಡಲು ಸಾಧ್ಯವಾಗುತ್ತಿಲ್ಲ.

# ಹಳೇಬೀಡು ನಾಡ ಕಚೇರಿ ಉದ್ಘಾಟನೆ



ಹಳೇಬೀಡು: ಹಳೇಬೀಡಿನ ನಾಡ ಕಚೇರಿಯನ್ನು 60 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿದ್ದು ಇನ್ನು ಮುಂದೆ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ ಎಂದು ಶಾಸಕ ಎಚ್.ಕೆ. ಸುರೇಶ್ ಹೇಳಿದರು.

ಹಳೇಬೀಡಿನಲ್ಲಿ ನಾಡ ಕಚೇರಿ ಕಟ್ಟಡ ಉದ್ಘಾಟಿಸಿ ಮಾತನಾಡಿ, ಶೌಚಾಲಯ ಮೊದಲಾದ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಮ ಲೆಕ್ಕ ಅಧಿಕಾರಿಗಳಿಗೆ ನಾಡ ಕಚೇರಿಯಲ್ಲಿಯೇ ಕೊಠಡಿ ನಿರ್ಮಿಸಿಕೊಡಬೇಕು. ಒಂದೇ ಜಾಗದಲ್ಲಿ ಕಂದಾಯ ಇಲಾಖೆ ಕೆಲಸ ಸುಗಮವಾಗಿ ನಡೆಯುವಂತಾಗಬೇಕು ಎಂದರು.

ಊರಿನ ಹೃದಯ ಭಾಗದಲ್ಲಿ ಸರ್ಕಾರಿ ಕಚೇರಿಗಳಿದ್ದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ಹಳೇಬೀಡಿನ ನಾಡ ಕಚೇರಿಯ ಹೊಸ ಕಟ್ಟಡ ಬಸ್ ನಿಲ್ದಾಣ ಹಾಗೂ ಪ್ರಮುಖವಾದ ಬಸವೇಶ್ವರ ವೃತ್ತಕ್ಕೆ ಹತ್ತಿರದಲ್ಲಿದೆ. ಹೊಸ ಕಟ್ಟಡದಲ್ಲಿ ಸಾರ್ವಜನಿಕ ಕೆಲಸ ಸುಗಮವಾಗಿ ಸಾಗುವಂತೆ ನೋಡಿಕೊಳ್ಳುತ್ತೇವೆ ಎಂದು ಸುರೇಶ್ ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್.ಆರ್. ಮಧು ಮಾತನಾಡಿ, ಶಿಥಿಲವಾದ ನಾಡಕಚೇರಿಯ ಹಳೆಯ ಕಟ್ಟಡ ಸೋರಿಕೆಯಾಗುತ್ತಿದ್ದರಿಂದ ಸಾರ್ವಜನಿಕ ಕೆಲಸಗಳಿಗೆ ತೊಡಕಾಗಿತ್ತು. ಶಾಸಕರು ಹಳೆಯ ಕಟ್ಟಡ ತೆರವು ಮಾಡಿಸಿ ಹೊಸ ಕಟ್ಟಡ ನಿರ್ಮಾಣ ಮಾಡಿದ್ದರಿಂದ ಕಂದಾಯ ಇಲಾಖೆಯ ಸಾಮಾಜಿಕ ಭದ್ರತಾ ಕೆಲಸಗಳಿಗೆ ಅನುಕೂಲವಾಗಲಿದೆ ಎಂದರು.

# ಮಳೆ ನೀರು ಬಳಕೆಗೆ ಯೋಗ್ಯ: ವಿಜಯ್ ಅಂಗಡಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಮಳೆ ನೀರನ್ನು ಉಪಯೋಗಿಸುವುದರಿಂದ ಮನುಷ್ಯನ ಆರೋಗ್ಯಕ್ಕಲ್ಲದೆ ಕೃಷಿಯಲ್ಲೂ ಲಾಭದಾಯಕವಾಗುತ್ತದೆ ಎಂದು ಹಾಸನ ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ವಿಜಯ್ ಅಂಗಡಿ ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಭರತವಳ್ಳಿ ಗ್ರಾಮದ ಬಳಿ ಇರುವ ಪುಣ್ಯಭೂಮಿ ಸಂಸ್ಥೆ ಆವರಣದಲ್ಲಿ ರೈತರಿಗಾಗಿ ಏರ್ಪಡಿಸಲಾಗಿದ್ದ ಕೃಷಿಕರ ಬದುಕಿನ ಬಗ್ಗೆ ಪರಾಮರ್ಶೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಳೆಗಾಲದಲ್ಲಿ ಮಳೆ ನೀರು ಬಹಳ ಸುಲಭವಾಗಿ ಯಾವುದೆ ಖರ್ಚಿಲ್ಲದೆ ಸಿಗುತ್ತದೆ. ಮನೆ ಮೇಲೆ ಬೀಳುವ ಮಳೆ ನೀರನ್ನು ಮೊದಲೆರಡು ಮಳೆ ಬಂದಾಗ ಸಂಗ್ರಹಿಸಬಾರದು. ನಂತರದಲ್ಲಿ ಮನೆ ಮೇಲಿದ್ದ ಗಲೀಜು ಶುದ್ಧವಾಗಿ ತೊಳೆದು ಹೋದ ನಂತರ ಮನೆ ಮೇಲೆ ಬೀಳುವ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಈ ನೀರನ್ನು ತೆಳುವಾದ ಬಿಳಿ ಬಟ್ಟೆಯಲ್ಲಿ ಶೋಧಿಸಿ ಕುಡಿಯುವುದರಿಂದ ದೇಹ ಶುದ್ಧವಾಗಿ ರೋಗ ರಹಿತ ಜೀವನ ನಡೆಸಬಹುದು.




ಸಂಗ್ರಹಿಸಿದ ಮಳೆ ನೀರು ಎಂದಿಗೂ ಕಲುಷಿತವಾಗುವುದಿಲ್ಲ ಎಂದರು.

ಜಲಾಶಯ, ಕೆರೆ, ನದಿ, ತೆರೆದ ಬಾವಿ, ಕೊಳವೆ ಬಾವಿ ಇನ್ನಿತರೆ ಸ್ಥಳಗಳಲ್ಲಿರುವ ನೀರು ಕಲುಷಿತವಾಗಿರುತ್ತದೆ. ಹಿಂದಿನ ಕಾಲದಲ್ಲಿ ಬಹುತೇಕ ಗ್ರಾಮೀಣ ಪ್ರದೇಶದ ಜನರು, ರೈತರು ಗದ್ದೆ ನೀರನ್ನು ಕುಡಿದು ಬದುಕಿರುವ ಉದಾಹರಣೆ ಇದೆ. ಆದರೆ ಹಲವು ದಶಕಗಳಿಂದೀಚೆಗೆ ಅಧಿಕ ಲಾಭ ಗಳಿಸುವ ಉದ್ದೇಶದಿಂದ ಕೃಷಿಯಲ್ಲಿ ರಸಾಯನಿಕ ಗೊಬ್ಬರ, ಕ್ರಿಮಿನಾಶಕವನ್ನು ಗದ್ದೆ, ಹೊಲಗಳಲ್ಲಿ ಬೆಳೆಗಾಗಿ ಸಿಂಪಡಿಸುತ್ತಿರುವುದರಿಂದ ಭೂಮಿ ಮೇಲೆ ಬೀಳುವ ಮಳೆ ನೀರು ಕಲುಷಿತವಾಗಿರುತ್ತದೆ. ಮಳೆ ನೀರು ಸಂಗ್ರಹಕ್ಕೆ 500 ರಿಂದ ಹತ್ತಾರು ಸಾವಿರ ರೂ. ಖರ್ಚು ಮಾಡಿದರೆ ಸಾಕು ಎಂದು ಹೇಳಿದರು.

ಪುಣ್ಯಭೂಮಿ ಗೌರವಾಧ್ಯಕ್ಷ ಗಿಡ್ಡೇಗೌಡ, ದೊಡ್ಡವೀರೇಗೌಡ, ಆರ್.ಕೆ. ದಯಾನಂದ, ಜಿ. ಮಹೇಶಕುಮಾರ್, ಮಹಾಂತೇಶ್, ಕುಮಾರಸ್ವಾಮಿ, ಹೇಮ ಅನಂತಸ್ವಾಮಿ ಮತ್ತಿತರರಿದ್ದರು.

# ಮಕ್ಕಳ ಕಲಿಕೆಗೆ ಪೂರಕ ವಾತಾವರಣ ನಿರ್ಮಿಸಿ: ಶಂಭುನಾಥ ಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಸೀಕೆರೆ: ಪೋಷಕರು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಸುಂದರ ಕನಸು ಕಾಣುವುದು ತಪ್ಪಲ್ಲ, ಅದಕ್ಕೆ ಪೂರಕ ವಾತಾವರಣ ನಿರ್ಮಿಸಿಕೊಡುವುದು ಜವಾಬ್ದಾರಿ ಎಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.



ನಗರದ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಹಮ್ಮಿಕೊಂಡಿದ್ದ ಸ್ವಾಗತ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಸ್ಪರ್ಧಾತ್ಮಕ ಯುಗದಲ್ಲಿ ನಾವೆಲ್ಲ ಸಾಗುತ್ತಿದ್ದೇವೆ. ಅದಕ್ಕೆ ವಿದ್ಯಾರ್ಥಿಗಳು ಹೊರತಾಗಿಲ್ಲ, ಸಿಇಟಿ/ನೀಟ್/ಜೆಇಇ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ನಾವು ನಮ್ಮ ಮಕ್ಕಳನ್ನ ಸಿದ್ಧಪಡಿಸಬೇಕಾಗಿದೆ, ಇಂತಹ ಸಂದರ್ಭಗಳಲ್ಲಿ ಪೋಷಕರು ತೆಗೆದುಕೊಳ್ಳುವ ನಿರ್ಧಾರಗಳು ವಿದ್ಯಾರ್ಥಿಗಳ ಭವಿಷ್ಯದ ದಿಕ್ಸೂಚಿಯಾಗಿರುತ್ತದೆ ಎಂದು ಕಿವಿಮಾತು ಹೇಳಿದರು.

ಭೈರವೈಕ್ಯ ಡಾ.ಬಾಲಗಂಗಾಧರ ನಾಥ ಸ್ವಾಮೀಜಿಗಳ ಸಂಕಲ್ಪ ಹಾಗೂ ಅವರ ದೂರ ದೃಷ್ಟಿಕೋನ ಇಂದು ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ಬೆಳಕಾಗಿದೆ. ಆದಿಚುಂಚನಗಿರಿ ಮಠದ ಆಶ್ರಯದಲ್ಲಿ ನಡೆಯುತ್ತಿರುವ ಶಾಲಾ ಕಾಲೇಜುಗಳು ಪ್ರತಿಯೊಂದು ಮಗುವಿನ ಭವಿಷ್ಯಕ್ಕೆ ಭದ್ರ ಬುನಾದಿ ನಿರ್ಮಿಸಿ ಕೊಡುತ್ತಿದೆ ಇದೇ ಆದಿಯಲ್ಲಿ ಅರಸೀಕೆರೆ ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜು ಸಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಚಿಕ್ಕಮಗಳೂರಿನ ಆದಿಚುಂಚನಗಿರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಸಿ.ಟಿ ಜಯದೇವ್ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸವಾಲು ಎಂದು ಪರಿಗಣಿಸದೆ ಸಹಜವಾಗಿ ಎದುರಿಸುವ ಮನಸ್ಥಿತಿಯನ್ನು ಮೊದಲು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸಿಕೊಡುವ ಜವಾಬ್ದಾರಿ ಪೋಷಕರು ಸಮಾಜ ಹಾಗೂ ತಾವು ವಿದ್ಯಾಭ್ಯಾಸ ಮಾಡುವ ಶಿಕ್ಷಣ ಸಂಸ್ಥೆಯದಾಗಿದೆ ಎಂದರು.

ಈ ನಿಟ್ಟಿನಲ್ಲಿ ಅರಸೀಕೆರೆ ಆದಿಚುಂಚನಗಿರಿ ಕಾಲೇಜು ಶಂಭುನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಅನುಭವಿ ಬೋಧಕ, ಬೋಧಕೇತರ ಸಿಬ್ಬಂದಿಗಳ ಪರಿಶ್ರಮ ಫಲವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಇಲ್ಲಿನ ಕಾಲೇಜಿನ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ತೋರುವ ಮೂಲಕ ತಮ್ಮ ಪೋಷಕರ ಕನಸನ್ನು ನನಸು ಮಾಡುವುದರ ಜೊತೆಗೆ ಕಾಲೇಜಿನ ಅಧ್ಯಾಪಕರ ವೃಂದದ ಶ್ರಮವನ್ನು ಸಾರ್ಥಕ ಗೊಳಿಸುತ್ತಿರುವುದು ಸಂತಸದ ವಿಷಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ.ಲಿಂಗರಾಜು ಮಾತನಾಡಿದರು. ಸಮಾರಂಭದ ಬಳಿಕ ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮ ಗಮನ ಸೆಳೆಯಿತು.

# ಜಿಲ್ಲೆಯ 82 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆ ನಾಶ



ನವದೆಹಲಿ: ಜಿಲ್ಲೆಯ 82 ಸಾವಿರ ಹೆಕ್ಟೇರ್ ತೆಂಗು ಬೆಳೆ ರೋಗಬಾಧೆಯಿಂದ ನಾಶವಾಗಿದ್ದು ತೆಂಗು ಬೆಳೆಗಾರರಿಗೆ ವಿಶೇಷ ಪರಿಹಾರ ಘೋಷಿಸಬೇಕು ಎಂದು ಸಂಸದ ಶ್ರೇಯಸ್ ಪಟೇಲ್ ಮಂಗಳವಾರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರಿಗೆ ಮನವಿ ಸಲ್ಲಿಸಿದರು.

ನವದೆಹಲಿಯಲ್ಲಿ ಸಚಿವರನ್ನು ಭೇಟಿಯಾದ ಅವರು, ಜಿಲ್ಲೆಯಲ್ಲಿ 1.18 ಲಕ್ಷ ಹೆಕ್ಟೇರ್‌ನಲ್ಲಿ ತೆಂಗು ಬೆಳೆಯಲಾಗುತ್ತಿದ್ದು ರಾಜ್ಯದಲ್ಲಿ ಅತಿಹೆಚ್ಚು ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಹಾಸನಕ್ಕೆ ದ್ವಿತೀಯ ಸ್ಥಾನವಿದೆ. ಈ ಬಾರಿ ರೋಗ ಉಲ್ಬಣವಾಗಿ ತೆಂಗಿನ ಮರಗಳೆಲ್ಲ ನಾಶವಾಗಿವೆ. ಕೇಂದ್ರ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನೆರವಾಗಬೇಕು ಎಂದು ಕೋರಿದರು.

ಇತ್ತೀಚೆಗೆ ಕೇಂದ್ರೀಯ ತೋಟಗಾರಿಕಾ ಬೆಳೆ ಸಂಶೋಧನಾ ಸಂಸ್ಥೆ (ಸಿಪಿಸಿಆರ್‌ಐ) ನಡೆಸಿದ ಸಮೀಕ್ಷೆ ಪ್ರಕಾರ ತೆಂಗು ಬೆಳೆ ಹಾಳಾಗಲು ಕಪ್ಪುತಲೆ ಹುಳು, ರುಗೋಸ್ ವೈಟ್ ಫ್ಲೈ ಕೀಟ ಮತ್ತು ಸ್ಟೆಮ್ ಬ್ಲೀಡಿಂಗ್, ಗಣೋಡರ್ಮ ವಿಲ್ಟ್ ರೋಗಬಾಧೆ ಕಾರಣವೆಂಬ ಮಾಹಿತಿ ತಿಳಿದುಬಂದಿದೆ. ಹೀಗಾಗಿ 82 ಸಾವಿರ ಹೆಕ್ಟೇರ್ ತೆಂಗು ವೈಟ್ ಫ್ಲೈ ಕೀಟಬಾಧೆ, 15,704 ಹೆ. ಸ್ಟೆಮ್ ಬ್ಲೀಡಿಂಗ್ ರೋಗ ಹಾಗು 10,473 ಹೆಕ್ಟೇರ್‌ನಲ್ಲಿ ಬೆಳೆದಿದ್ದ ತೆಂಗು ಕಪ್ಪುತಲೆ ಹುಳಿವಿನಿಂದಾಗಿ ನೆಲಕಚ್ಚಿದೆ. ಅರಸೀಕೆರೆ ಮತ್ತು ಚನ್ನರಾಯಪಟ್ಟಣದಲ್ಲಿ ಅತಿಹೆಚ್ಚು ಹಾನಿಯುಂಟಾಗಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆಂದು ಸಚಿವರ ಗಮನ ಸೆಳೆದರು. ಸಿಪಿಸಿಆರ್‌ಐನ ಪ್ರಾತ್ಯಕ್ಷಿಗೆಳನ್ನು ಅರಸಿಕೆರೆ, ಚನ್ನರಾಯಪಟ್ಟಣ, ಬೇಲೂರು, ಹಾಸನ ಮತ್ತು ಹೊಳೆನರಸೀಪುರ ತಾಲ್ಲೂಕಿನಲ್ಲಿ ವಿಸ್ತರಿಸಬೇಕು. ಅರಸೀಕೆರೆ ಹಾಗೂ ಹೊಳೆನರಸೀಪುರದಲ್ಲಿ ಜೈವಿಕ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆಗೆ ಮಂಜೂರಾತಿ ನೀಡಬೇಕು. ಜೊತೆಗೆ ತೆಂಗು ಅಭಿವೃದ್ಧಿ ಮಂಡಳಿಯಿಂದ ಜಿಲ್ಲೆಯ ತೆಂಗು ಬೆಳೆಗಾರರಿಗೆ ವಿಶೇಷ ಪರಿಹಾರ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿದರು.

# ಒಕ್ಕಲಿಗ ಸಮುದಾಯಕ್ಕೆ ಅವಮಾನ: ಪ್ರತಿಭಟನೆ



ಆಲೂರು: ಒಕ್ಕಲಿಗ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಭೋವಿ ಸಮುದಾಯದ ಮಾಜಿ ರಾಜ್ಯಾಧ್ಯಕ್ಷ ಮೈಸೂರಿನ ಸೀತಾರಾಮ್ ಅವರನ್ನು ಬಂಧಿಸುವಂತೆ ಒತ್ತಾಯಿಸಿ ತಾಲ್ಲೂಕು ಒಕ್ಕಲಿಗ ಸಮುದಾಯದ ಮುಖಂಡರು ಮಿನಿ ವಿದಾನಸೌಧ ಎದುರು ಪ್ರತಿಭಟನೆ ನಡೆಸಿದರು.

ಒಕ್ಕಲಿಗ ಸಮುದಾಯದ ತಾಲ್ಲೂಕು ಅಧ್ಯಕ್ಷ ಹೆಚ್.ಪಿ. ಮೋಹನ್ ಮಾತನಾಡಿ, ಸೀತಾರಾಮ್ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಈತನ ವಿರುದ್ಧ ಜಾತಿ ನಿಂದನೆ ಆರೋಪದ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಬಂಧನ ಮಾಡಬೇಕು. ಯಾವುದೇ ಒಬ್ಬ ವ್ಯಕ್ತಿ ಮತ್ತೊಂದು ಜಾತಿ, ವ್ಯಕ್ತಿ ಬಗ್ಗೆ ಮಾತನಾಡುವ ಹಕ್ಕು ಹೊಂದಿರುವುದಿಲ್ಲ ಎಂದರು.

# ಬೈಕ್ ಡಿಕ್ಕಿಯಾಗಿ ವೃದ್ಧ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನ ಬ್ಯಾಡರಹಳ್ಳಿ ಗೇಟ್ ಬಳಿ ಎರಡು ಬೈಕ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಸವಾರ ಮೃತಪಟ್ಟು ಹಿಂಬದಿ ಕುಳಿತಿದ್ದವರು ಗಾಯಗೊಂಡಿದ್ದಾರೆ.

ಬಾಗೂರು ಹೋಬಳಿ ಮಡಬಲು ಗ್ರಾಮದ ರಂಗೇಗೌಡ ಮೃತರು. ಅದೇ ಊರಿನ ನಂಜೇಗೌಡ ಗಾಯಾಳು. ವೃದ್ಧಾಪ್ಯ ವೇತನ ತರುವುದಕ್ಕಾಗಿ ಇಬ್ಬರೂ ಬೈಕ್‌ನಲ್ಲಿ ಬ್ಯಾಡರಹಳ್ಳಿ ಅಂಚೆ ಕಚೇರಿಗೆ ತೆರಳುತ್ತಿದ್ದರು. ಬ್ಯಾಡರಹಳ್ಳಿ ಗೇಟ್ ಸಮೀಪ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಬೈಕ್ ಡಿಕ್ಕಿಯಾಗಿದೆ.

ಅಪಘಾತದ ರಭಸಕ್ಕೆ ಇಬ್ಬರೂ ಕೆಳಗೆ ಬಿದ್ದಿದ್ದು ತಲೆಗೆ ಬಲವಾದ ಏಟು ಬಿದ್ದ ಪರಿಣಾಮ ರಂಗೇಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಗಾಯಾಳು ನಂಜೇಗೌಡ ಅವರನ್ನು ಚಿಕಿತ್ಸೆಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹಿರೋಶಿಮಾ: ಮರೆಯಲಾಗದ ಕಹಿ ನೆನಪಿಗೆ 80 ವರ್ಷ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಗಸ್ಟ್ 6, 1945 ಇಡೀ ಜಗತ್ತಿನ ಇತಿಹಾಸದಲ್ಲಿ ಕರಾಳ ಅಧ್ಯಾಯವಾಗಿ ಉಳಿದ ದಿನ. ಇದೇ ದಿನ ಜಪಾನ್‌ನ ಹಿರೋಶಿಮಾ ನಗರದ ಮೇಲೆ ಮೊದಲ ಬಾರಿಗೆ ಅಣುಬಾಂಬ್ ದಾಳಿ ನಡೆಯಿತು. ಅಮೆರಿಕದ ಸೇನೆ ಎನೋಲಾ ಗೇ ಎಂಬ ಬಾಂಬರ್ ವಿಮಾನದ ಮೂಲಕ ಲಿಟಲ್ ಬಾಯ್ ಎಂಬ ಅಣುಬಾಂಬ್ ಅನ್ನು ಬಿಸಾಡಿತು.

ಬೆಳಿಗ್ಗೆ 8.15ರ ಹೊತ್ತಿಗೆ ಹಿರೋಶಿಮಾ ನಗರ ಧ್ವಂಸವಾಗಿ ಬಿಟ್ಟಿತು. ತಕ್ಷಣವೇ ಸುಮಾರು 70 ರಿಂದ 80 ಸಾವಿರ ಮಂದಿ ಸಾವಿಗೀಡಾಗಿದ್ದು, ಹತ್ತಿರ ಹತ್ತಿರದ ತಿಂಗಳಲ್ಲಿ ಈ ಸಂಖ್ಯೆ 1,40,000 ಮೀರಿತು. ಅನೇಕರು ಅಣು ಕಿರಣ ರೋಗಗಳಿಂದ ಬದುಕು ಕಳೆದುಕೊಂಡರು.

ಪೂರ್ಣ ನಗರ ಉಸಿರಾಡಲಾಗದ ಹಳ್ಳಿಯಾಗಿಬಿಟ್ಟಿತ್ತು. ಜಗತ್ತಿನಲ್ಲಿ ಮೊದಲ ಬಾರಿಗೆ ಮಾನವನು ಮಾನವನ ಮೇಲೆ ಇಂಥ ಭೀಕರ ಶಸ್ತ್ರ ಉಪಯೋಗಿಸಿದ್ದ ದಿನವಿದು.

ಇಂದು ಹಿರೋಶಿಮಾ ಶಾಂತಿಯ ಪಾಠ ಬೋಧಿಸುವ ಸಾಂಸ್ಕೃತಿಕ ಕೇಂದ್ರವಾಗಿ ಪರಿಣಮಿಸಿದೆ. **Peace Memorial Park, A-Bomb Dome** ಮತ್ತು ಹಿರೋಶಿಮಾ ಮ್ಯೂಸಿಯಂಗಳು ಲಕ್ಷಾಂತರ ಮಂದಿಯನ್ನು ಪ್ರತಿವರ್ಷ ತನ್ನೆಡೆಗೆ ಸೆಳೆಯುತ್ತವೆ. ಪ್ರತಿವರ್ಷ ಆಗಸ್ಟ್ 6 ರಂದು ಹಿರೋಶಿಮಾ ದಿನವನ್ನಾಗಿ ಆಚರಿಸಲಾಗುತ್ತದೆ. ಇದು ಯುದ್ಧ ವಿರೋಧದ ಚಳವಳಿ, ಅಣುಶಸ್ತ್ರ ನಿಷೇಧಕ್ಕಾಗಿ ನಡೆಯುವ ಶ್ರದ್ಧಾಂಜಲಿಯ ದಿನ.



### ಯುದ್ಧದ ಪರಿಣಾಮ

1. ಪೂರ ನಗರ ಸಂಪೂರ್ಣವಾಗಿ ಧ್ವಂಸವಾಯಿತು ಸೊಂಪಾದ ಕಟ್ಟಡಗಳು ಮಣ್ಣಿನಡಿ ಸಿಲುಕಿದವು.
2. ಮಾನವ ಹಕ್ಕುಗಳ ಮೇಲೆ ಗಂಭೀರ ಪರಿಣಾಮ ಚರ್ಮ ಸುಟ್ಟಿತು, ಮಕ್ಕಳು ಸಹ ತೀವ್ರ ಗಾಯಗೊಂಡರು.
3. ಅಣು ಕಿರಣಗಳ ಪರಿಣಾಮ ಅನೇಕರು ಹಲವಾರು ವರ್ಷಗಳ ಕಾಲ ಕ್ಯಾನ್ಸರ್, ಲ್ಯೂಕೇಮಿಯಾ, ಜನನ ದೋಷಗಳಿಂದ ನರಳಿದರು.
4. ಮನುಷ್ಯತ್ವದ ನೈತಿಕತೆ ಮೇಲೆ ಪ್ರಶ್ನೆಗಳು ಇಂಥ ಹಿಂಸಾತ್ಮಕ ದಾಳಿ ಅನಿವಾರ್ಯವಿತ್ತೇ ಎಂಬ ಚರ್ಚೆಗಳು ಇಂದಿಗೂ ನಡೆಯುತ್ತಿವೆ.

ಈಗ ಹೇಗಿದೆ ಹಿರೋಶಿಮಾ

ಹಿರೋಶಿಮಾದ ಅಣು ಬಾಂಬ್ ಸ್ಮಾರಕ ಉದ್ಯಾನವನ, ಪ್ರತಿವರ್ಷ ಲಕ್ಷಾಂತರ ಜನರು ಇಲ್ಲಿ ಶ್ರದ್ಧಾಂಜಲಿ ಅರ್ಪಿಸುತ್ತಾರೆ. ಬಾಂಬ್ ದಾಳಿಯಲ್ಲಿ ಉಳಿದ ಅಪರೂಪದ ಕಟ್ಟಡ ಈಗ ವಿಶ್ವ ಹೆರಿಟೇಜ್ ಸ್ಥಳ. ಪ್ರಪಂಚದಾದ್ಯಂತ ಶಾಂತಿ, ಅಣು ಶಸ್ತ್ರ ನಿವಾರಣೆಯ ದಿನವನ್ನಾಗಿ ಆಚರಿಸಲಾಗುತ್ತದೆ.

### ಇತಿಹಾಸ ಕಲಿಸಿದ ಪಾಠ

ಹಿರೋಶಿಮಾ ದಾಳಿ ಮಾನವ ಇತಿಹಾಸದ ಹೆಚ್ಚಿನ ದುರ್ಘಟನೆಯೊಂದು. ಇದು ನಮಗೆ ಯುದ್ಧದ ಭೀಕರತೆಯನ್ನು, ಅಣ್ವಾಯುಧಗಳ ಅಪಾಯವನ್ನು ಮತ್ತು ಶಾಂತಿಯ ಅವಶ್ಯಕತೆಯನ್ನು ಬೋಧಿಸುತ್ತದೆ



ಎಂಬ ಧ್ವನಿಯೊಂದಿಗೆ ಜಗತ್ತಿನಾದ್ಯಂತ ಶಾಂತಿಯ ಹಂಬಲವಿದೆ.

ಹಿರೋಶಿಮಾ ಏಕೆ ಅವಶ್ಯವಾಗಿ ನೆನಪಿನಲ್ಲಿ ಇರಬೇಕು ಎಂದರೆ ಅದು ನಮಗೆ ಸತ್ತವರ ಕತೆ ಮಾತ್ರವಲ್ಲ, ಬಾಳಿದವರ ಹೋರಾಟವೂ ಹೌದು. ಇದು ಶಕ್ತಿಯಲ್ಲೊಂದು ಸುಧಾರಣೆಯುಂಟು ಮಾಡುವ ಸಾಧ್ಯತೆಯಿದೆಯೆಂಬ ನಂಬಿಕೆಯನ್ನು ಹುಟ್ಟು ಹಾಕುತ್ತದೆ. ಹೀಗಾಗಿ ಹಿರೋಶಿಮಾ ಇತಿಹಾಸವಿಲ್ಲದೆ ಮಾನವ ಇತಿಹಾಸದ ಪಾಠ ಅಪೂರ್ಣವಾಗಿದೆ.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-06

11945: ಅಮೆರಿಕದ ಬಾಹ್ಯಾಂಗ ಹವಾಮಾನ ವಿಮಾನ ಎನೋಲಾ ಗೇ ಜಪಾನಿನ ಹಿರೋಶಿಮಾ ನಗರದ ಮೇಲೆ ಮೊದಲ ಬಾರಿಗೆ ಅಣುಬಾಂಬ್ ಹಾರಿಸಿತು. ಬಾಂಬ್ ಹೆಸರು: ಲಿಟಲ್ ಬಾಯ್. ತಕ್ಷಣವೇ ಲಕ್ಷಾಂತರ ಜನರು ಮೃತರಾದರು.

1906: ಭಾರತೀಯ ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್ ಜನಿಸಿದರು. ಆಜಾದ್ ಭಾರತದ ಕ್ರಾಂತಿಕಾರಿ ನಾಯಕರಲ್ಲಿ ಒಬ್ಬರು.

1960: ಚೀನಾ ತನ್ನ ಮೊದಲ ಕೃತ್ರಿಮ ಉಪಗ್ರಹ ಯಶಸ್ವಿಯಾಗಿ ಉಡಾಯಿಸಿತು.

### ಜನನ

1906: ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್.
1809: ಇಂಗ್ಲೆಂಡ್‌ನ ಪ್ರಸಿದ್ಧ ಕವಿ ಅಲಫ್ರೆಡ್ ಟೇನ್ನಿಸನ್.
1881: ಅಲೆಕ್ಸಾಂಡರ್ ಫ್ಲೆಮಿಂಗ್

### ಮರಣ

1978: ಕ್ಯಾಥೋಲಿಕ್ ಚರ್ಚ್‌ನ ಪೋಪ್ ಪಾಲ್
2004: ಪ್ರಸಿದ್ಧ ಡ್ರಮ್ ವಾದಕ ರಿಕಿ ಲೂಸನ್
2009: ಅಮೆರಿಕದ ಚಲನಚಿತ್ರ ನಿರ್ದೇಶಕ ಜಾನ್ ಹ್ಯೂಸ್

# ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ಬೇಲೂರು: ಶಾಲಾ ಶಿಕ್ಷಣಾ ಇಲಾಖೆ ಹಾಗೂ ಯುನೈಟೆಡ್ ಅಕಾಡಮಿ ಆಂಗ್ಲ ಮಾಧ್ಯಮ ಶಾಲೆ ವತಿಯಿಂದ ಹಮ್ಮಿಕೊಂಡಿದ್ದ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಶಾಸಕ ಹೆಚ್.ಕೆ. ಸುರೇಶ್ ಚಾಲನೆ ನೀಡಿದರು.

ವಿದ್ಯಾರ್ಥಿಗಳ ಜೀವನದಲ್ಲಿ ಕ್ರೀಡೆ ಒಂದು ಅತ್ಯಮೂಲ್ಯ ಭಾಗವಾಗಿದೆ. ಪೋಷಕರು ಸಹ ವಿದ್ಯಾರ್ಥಿಗಳಿಗೆ ಆತ್ಮಸ್ಥೈರ್ಯ ತುಂಬುವ ಮೂಲಕ ಕ್ರೀಡೆಯಲ್ಲಿ ಭಾಗವಹಿಸುವ ಮೂಲಕ ಅವರನ್ನು ಪ್ರೋತ್ಸಾಹಿಸಬೇಕು. ವಿದ್ಯಾರ್ಥಿ ದಿಸೆಯಲ್ಲಿ ಆರೋಗ್ಯವಂತ ಸಮಾಜ ಕಟ್ಟುವಲ್ಲಿ ಕ್ರೀಡೆಯ ಪಾತ್ರ ಬಹಳ ಮಹತ್ವವಾಗಿದ್ದು ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಬೇಕು. ಕ್ರೀಡಾಕೂಟಗಳು ಮಕ್ಕಳಿಗೆ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಮಾನಸಿಕ, ದೈಹಿಕವಾಗಿ ಸದೃಢರಾಗಲು ನೆರವಾಗುತ್ತದೆ. ಈ ನಿಟ್ಟಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಪಾತ್ರ ಮಹತ್ವ ವಾಗಿದ್ದು ಭವಿಷ್ಯದಲ್ಲಿ ಉತ್ತಮ ಕ್ರೀಡಾಪಟುಗಳನ್ನು ರೂಪಿಸಲು ಇದು ಉತ್ತಮ ವೇದಿಕೆಯಾಗಿದೆ ಎಂದರು.

ಕ್ರೀಡಾ ಜ್ಯೋತಿ ಸ್ವಾಗತಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ, ಶಾಲಾ ಮಟ್ಟದಿಂದ ಮಕ್ಕಳಲ್ಲಿ ಲಹರಿಯುತ ಶಾರೀರಿಕ ಮತ್ತು ಮಾನಸಿಕ ಅಭಿವೃದ್ಧಿಗೆ ಕ್ರೀಡೆ ಅತ್ಯಂತ ಅಗತ್ಯ. ಈ ರೀತಿಯ ಕ್ರೀಡಾಕೂಟಗಳು ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವ, ಶಿಸ್ತು ಮತ್ತು ಸಹಕಾರ ಗುಣಗಳನ್ನು ಬೆಳೆಸುವಲ್ಲಿ ನೆರವಾಗುತ್ತದೆ ಎಂದು ಹೇಳಿದರು. ಪ್ರಾಥಮಿಕ ಹಂತದಲ್ಲೇ ವಿದ್ಯಾರ್ಥಿಗಳಿಗೆ ಈ ರೀತಿಯ ವೇದಿಕೆ ಸಿಗುವುದು ಪ್ರಯೋಜನಕಾರಿಯಾಗಿದೆ. ಶಾಲೆಗಳು ಶೈಕ್ಷಣಿಕ ಹಾಗೂ ಸಹ ಪಠ್ಯ ಚಟುವಟಿಕೆಗಳಲ್ಲಿ ಸಮಬಲ ಹೊಂದಬೇಕು. ಯುನೈಟೆಡ್ ಶಾಲೆಯ ಸಹಯೋಗವು ಈ ಪ್ರಯತ್ನಕ್ಕೆ ಇನ್ನಷ್ಟು ಶಕ್ತಿ ತುಂಬಿದೆ ಎಂದರು.

ಯುನೈಟೆಡ್ ಅಕಾಡೆಮಿ ಕಾರ್ಯದರ್ಶಿ ಎಂ.ಡಿ. ದಿನೇಶ್ ಮಾತನಾಡಿ, ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ನಮಗೆ ಎಲ್ಲಾ ರೀತಿಯ ಸಹಕಾರ ನೀಡಿದ ತಾಲ್ಲೂಕಿನ ಎಲ್ಲಾ ಶಾಲಾ ಶಿಕ್ಷಕರಿಗೆ ಹಾಗೂ ಪೋಷಕರಿಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248